ತೊಂದರೆ ಇದ್ದರೂ ಈ ಕಾರ್ಯಕ್ರಮಕ್ಕೋಸ್ಕರ ಒಂದು ಇತಿಮಿತಿಯಲ್ಲಿ ಎಷ್ಟು ಪ್ರಾಜೆಕ್ಟ್‌ಗಳನ್ನು ಮಂಜೂರ್ಮಾಡಿದರೂ ನಮ್ಮ ಸರ್ಕಾರ ಒಪ್ಪುವುದಕ್ಕೆ ತಯಾರಿದೆ ಮತ್ತು ಹಣವನ್ನು ಒದಗಿಸುವುದಕ್ಕೆ ತಯಾರಿದೆ. ಕೇಂದ್ರ ಸರ್ಕಾರಕ್ಕೆ ನಾವು ಪರಿಸ್ಥಿತಿಯನ್ನು ಅಪ್ರೈಸ್ ಮಾಡಿದ್ದೇವೆ.

ದಕ್ಷಿಣ ಕನ್ನಡ ಬೀಡಿ ಕಾರ್ಮಿಕರ ಬಗ್ಗೆ

೧೩೨. ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಲ).— ಮಾನ್ಯ ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇರುವ ಬೀಡಿ ತಯಾರಿಸುವ ಮಾಲೀಕರು ಎಷ್ಟು, ಬೀಡಿ ತಯಾರಿಕೆ ಗುತ್ತಿಗೆದಾರರು ಎಷ್ಟು ? ಹಾಗೂ ಬೀಡಿ ತಯಾರಿಕಾ ಕಾರ್ಮಿಕರು ಎಷ್ಟು ?

ಆ) ದಕ್ಷಿಣ ಕನ್ನಡ ಬೀಡಿ ಕಾರ್ಮಿಕರಿಗೆ ಈಚೆಗೆ ಮಂಜೂರಿಯಲ್ಲಿ ಹೆಚ್ಚಳ ಮಾಡಲಾಗಿದೆಯೇ ?

ಇ) ಈ ಬೀಡಿ ಕಾರ್ಮಿಕರಿಗೆ ಕೇರಳದ ರೀತಿಯಲ್ಲಿ ಬೀಡಿ ಮಜೂರಿಯನ್ನು ನಿಗದಿಮಾಡ ಲಾಗುವುದೇ ?

ಈ) ಇಲ್ಲಿರುವ ಬೀಡಿ ಗುತ್ತಿಗೆದಾರರನ್ನು ಕಾರ್ಮಿಕರು ಎಂಬ ನೆರೆಯಲ್ಲಿ ಪರಿಗಣಿಸಿ ಅವರ ಕೇಳಿಕೆಗಳನ್ನು ಪೂರೈಸಲು ವ್ಯವಸ್ಥೆ ಮಾಡಲಾಗುವುದೇ ?

ಶ್ರೀ ಎಸ್. ಕೆ. ಕಾಂತ (ಕಾರ್ಮಿಕ ಸಚಿವರು).—

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ;

೧.	ಬೀಡಿ ತಯಾರಿಸುವ ಮಾಲೀಕರ ಸಂಖ್ಯೆ	೧,೨೪೦
೨.	ಬೀಡಿ ತಯಾರಿಕಾ ಗುತ್ತಿಗೆದಾರರ ಸಂಖ್ಯೆ	೩,೭೦೦
೩.	ಬೀಡಿ ಕಾರ್ಮಿಕರ ಸಂಖ್ಯೆ	೩,೧೬,೯೩೫ ಜನ

ಆ) ದಕ್ಷಿಣ ಕನ್ನಡ ಬೀಡಿ ಕಾರ್ಮಿಕರಿಗೆ ಮಾತ್ರ ಕನಿಷ್ಟ ವೇತನವನ್ನು ಪರಿಷ್ಕರಿಸಲಾಗುವುದಿಲ್ಲ.

ಇ) ಎಲ್ಲ ಬೀಡಿ ಕಾರ್ಮಿಕರಿಗೆ ಈಗ ಇರುವ ಕನಿಷ್ಟ ವೇತನವನ್ನು ಪರಿಷ್ಕರಿಸಲು ಕರಡು ಅಧಿಸೂಚನೆಯನ್ನು ಹೊರಡಿಸುವ ವಿಚಾರವು ಪರಿಶೀಲನೆಯಲ್ಲಿದೆ.

ಈ) ಬೀಡಿ ಗುತ್ತಿಗೆದಾರರು ಕಾರ್ಮಿಕರ ಗುಂಪಿಗೆ ಸೇರುವುದಿಲ್ಲ. ಆದುದರಿಂದ ಅವರಿಗೆ ಕಾರ್ಮಿಕರಿಗೆ ಕೊಡುವ ಸವಲತ್ತುಗಳನ್ನು ದೊರಕಿಸಿಕೊಡಲು ಬರುವುದಿಲ್ಲ. ಬೀಡಿ ಉದ್ದಿಮೆಯಲ್ಲಿ ಜಾರಿಯಲ್ಲಿರುವ ಗುತ್ತಿಗೆ ಪದ್ಧತಿಯನ್ನು ನಿಷೇಧಿಸುವ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ.

೧೨-೦೦ ಎ. ಯಂ.

ಶ್ರೀ ಬಿ. ಎಂ. ಇದಿನಬ್ಬ.— ಮಾನ್ಯ ಅಧ್ಯಕ್ಷರೇ, ಇದು ಬಹಳ ಪ್ರಾಮುಖ್ಯವಾದ ವಿಚಾರ. ಕೇರಳದಲ್ಲಿ ೧ ಸಾವಿರ ಬೀಡಿಗೆ ೧೫ ರೂಪಾಯಿ ಚಿಲ್ಲರೆ ಕೊಡುತ್ತಿದ್ದಾರೆ. ಆದರೆ ಅದೇ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಹಳ ಕಡಿಮೆ ಕೊಡುತ್ತಿದ್ದಾರೆ. ಈಗ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಷ್ಟು ಕೊಡುತ್ತಿದ್ದಾರೆ, ಇವತ್ತಿನ ಕಷ್ಟಕಾಲದಲ್ಲಿ, ಪ್ರತಿಯೊಂದು ಸಾಮಗ್ರಿಯ ಬೆಲೆಯೂ ಹೆಚ್ಚಿರತಕ್ಕ ಕಾಲದಲ್ಲಿ ಅವರು ಜೀವನ ಮಾಡುವುದು ಬಹಳ ಕಷ್ಟವಾಗಿದೆ. ಆದ್ದರಿಂದ ಕೇರಳದಲ್ಲಿ ಕೊಡುತ್ತಿರುವಂತೆ ಇಲ್ಲೂ ಕೂಡ ಹೆಚ್ಚು ಹಣ ಕೊಡುವುದಕ್ಕೆ ಆಗುವುದಿಲ್ಲವೆ ? ಮಾನ್ಯ ಮಂತ್ರಿಗಳು ದಯವಿಟ್ಟು ಹೇಳಬೇಕು.

ಶ್ರೀ ಎಸ್. ಕೆ. ಕಾಂತ.— ಮಾನ್ಯ ಅಧ್ಯಕ್ಷರೇ, ನಾನು ಈಗಾಗಲೇ ಹೇಳಿದ್ದೇನೆ. ಕೆಲವರಲ್ಲಿ ೧ ಸಾವಿರ ಬೀಡಿ ಕಟ್ಟುವುದಕ್ಕೆ ೧೫ ರೂಪಾಯಿ ಚಿಲ್ಲರೆ ಕೊಡುತ್ತಿದ್ದಾರೆಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಇದರ ಬಗ್ಗೆ ನಾವು ಒಂದು ಡ್ರಾಫ್ಟ್ ನೋಟಿಫಿಕೇಷನ್‌ನ್ನು ಮಾಡಬೇಕೆಂದು ಯೋಚನೆ ಮಾಡುತ್ತಿದ್ದೇವೆ. ಇದರ ಜೊತೆಗೆ ಕೇರಳ, ಆಂಧ್ರ, ತಮಿಳ್ನಾಡು ಮತ್ತು ನಮ್ಮ ಕರ್ನಾಟಕದಲ್ಲಿ ಕನಿಷ್ಟ ವೇತನ ಈ ಬೀಡಿ ಕಾರ್ಮಿಕರಿಗೆ ಯಾವರೀತಿ ಇರಬೇಕೆಂಬ ಬಗ್ಗೆ ಎಲ್ಲಾ ರಾಜ್ಯಗಳ ಕಾರ್ಮಿಕ

ಮಂತ್ರಿಗಳ ಮತ್ತು ಕೇಂದ್ರ ಸರ್ಕಾರದ ಕಾರ್ಮಿಕ ಮಂತ್ರಿಗಳ ಮಧ್ಯೆ ಒಂದು ಮೀಟಿಂಗ್ ಆಯಿತು. ಈ ನಾಲ್ಕು ರಾಜ್ಯಗಳಲ್ಲಿಯೂ ಒಂದೇ ರೀತಿಯ ಸಂಬಳವನ್ನು ನಿಗದಿ ಮಾಡಬೇಕೆಂದು ತೀರ್ಮಾನವಾಗಿವೆ ಆದನ್ನು ನಾವು ಈಗ ವಿಚಾರ ಮಾಡುತ್ತಿದ್ದೇವೆ.

ಶ್ರೀ ಬಿ. ಎಂ. ಇದಿನಬ್ಬ.— ಸ್ವಾಮಿ, ಬೀಡಿ ಗುತ್ತಿಗೆದಾರರು ಕಾರ್ಮಿಕರ ಗುಂಪಿಗೆ ಸೇರುವುದಿಲ್ಲ ಆದ್ದರಿಂದ ಅವರಿಗೆ ಕಾರ್ಮಿಕರಿಗೆ ಕೊಡುವ ಸವಲತ್ತುಗಳನ್ನು ದೊರಕಿಸಿಕೊಡಲು ಬರುವುದಿಲ್ಲ. ಎಂದು ತಾವು ಹೇಳಿದ್ದೀರಿ. ಇತ್ತೀಚೆಗೆ ಪಂಂಗಳೂರಿನಲ್ಲಿ ಈ ಬೀಡಿ ಗುತ್ತಿಗೆದಾರರ ಒಂದು ಸಮ್ಮೇಳನ ಆಯಿತು. ಸುಮಾರು ೫ ಸಾವಿರಕ್ಕೂ ಮಿಕ್ಕಿ ಜನರು ಸೇರಿದ್ದರು. ಅದರಲ್ಲಿ ತಾವೂ ಕೂಡ ಭಾಗ ವಹಿಸಿದ್ದಿರಿ. ಅಲ್ಲಿ ತಾವು ಏನು ಅವತ್ತಿನ ದಿವಸ ಹೇಳಿದ್ದಿರಿ ಎಂದರೆ, ನಿಮ್ಮನ್ನು ಕಾರ್ಮಿಕರ ರೀತಿ ಅವರು ಇಟ್ಟುಕೊಳ್ಳುವುದಕ್ಕೆ ಸಾಧ್ಯ. ಹಳ್ಳಿ ಹಳ್ಳಿಗಳಲ್ಲಿ ನೀವು ಇಲ್ಲದಿದ್ದರೆ ಬೀಡಿ ಕಾರ್ಮಿಕರಿಗೆ, ಬಡವರಿಗೆ ಎಲೆ ಮತ್ತು ಹೊಗೇಸೊಪ್ಪು ಸಿಕ್ಕುವುದಕ್ಕೆ ಕಷ್ಟವಾಗುತ್ತದೆ ಎಂದು ಹೇಳಿದ್ದಿರಿ. ಆದರೆ ಇವತ್ತು ಇಲ್ಲಿ ತಾವು ಏನು ಹೇಳಿದ್ದೀರೆಂದರೆ ಈ ಗುತ್ತಿಗೇದಾರರನ್ನೇ ಸಂಪೂರ್ಣವಾಗಿ ತೆಗೆದು ಹಾಕುತ್ತೇವೆ ಎಂದಿದ್ದಿರಿ. ಹಾಗಾದರೆ ನೀವು ಗುತ್ತಿಗೆದಾರರನ್ನು ತೆಗೆದುಹಾಕುವುದಾದರೆ ತೆಗೆದುಹಾಕಿ ಆದರೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮತ್ತು ಕೊಡಗಿನಲ್ಲಿ ನೂರಕ್ಕೆ ೯೫ ಜನ ಬಡವರಲ್ಲಿ ಬಡವರಾದ ಅಲ್ಪ ಸಂಖ್ಯಾತರ, ಮುಸಲ್ಮಾನರ ಹೆಂಗಸರು ಬೀಡಿ ಕಟ್ಟುವ ಕೆಲಸ ಮಾಡುತ್ತಾರೆ. ಅವರು ತಮ್ಮ ದಣಿಗಳ ಮನೆಗೆ ಅಥವಾ ದಣಿಗಳು ಇಟ್ಟಿರುವಂಥ ಡಿಪೋಗಳಿಗೆ ಹೋಗಿ ಖಂಡಿತವಾಗಿಯೂ ಎಲೆ ಮತ್ತು ಹೊಗೇಸೊಪ್ಪನ್ನು ತರುವುದಕ್ಕೆ ಸಾಧ್ಯವೇ ಇಲ್ಲ. ಈಗಿರತಕ್ಕ ಪ್ರತಿಯೊಂದು ಮನೆಯಲ್ಲೂ ಬೀಡಿ ಕಟ್ಟುತಕ್ಕ ವ್ಯವಸ್ಥೆ ಇದ್ದು ಆ ಬಡ ಕಾರ್ಮಿಕರು ಒಂದು ಹೊತ್ತು ಗಂಜಿಯನ್ನು ಕುಡಿಯುವುದಕ್ಕೂ ಸಾಧ್ಯವಿಲ್ಲದಂತಾಗಿದೆ. ನೀವು ಗುತ್ತಿಗೆದಾರರನ್ನು ತೆಗೆಯಿರಿ, ಅಥವಾ ಬಿಡಿ ಆದರೆ ಮೊದಲಿನಂತೆ ಈ ಬಡ ಬೀಡಿ ಕಾರ್ಮಿಕರಿಗೆ ಎಲೆ ಮತ್ತು ಹೊಗೇಸೊಪ್ಪು ಸಿಕ್ಕುವಂತೆ ಪ್ರತಿಯೊಂದು ಗ್ರಾಮದಲ್ಲಿ, ಪ್ರತಿಯೊಂದು ಕುಟುಂಬಕ್ಕೂ ವ್ಯವಸ್ಥೆ ಮಾಡುತ್ತೀರಾ ಎಂಬುದನ್ನು ಮಾನ್ಯ ಮಂತ್ರಿಗಳು ದಯವಿಟ್ಟು ಹೇಳಬೇಕು.

ಶ್ರೀ ಎಸ್. ಕೆ. ಕಾಂತ.— ಈ ಬೀಡಿ ಗುತ್ತಿಗೆದಾರರು ಯಾರಿದ್ದಾರೆ ಇವರು ಬೀಡಿ ಮಾಲೀಕರು ಮತ್ತು ಬೀಡಿ ಕಾರ್ಮಿಕರ ಮಧ್ಯೆ ಮಧ್ಯವರ್ತಿಗಳಾಗಿ ಕೆಲಸ ಮಾಡುತ್ತಾರೆ. ಇಂಥ ಸಂದರ್ಭದಲ್ಲಿ ಸರ್ಕಾರ ಏನು ಹೇಳುತ್ತದೆಂದರೆ, ಯಾವುದೇ ಕಾರ್ಮಿಕರು, ಯಾವುದೇ ಹುದ್ದೆಯಲ್ಲಿ ಕೆಲಸ ಮಾಡುವಾಗ ಅಂಥ ಕಾರ್ಮಿಕರು ಸದರಿ ಉದ್ದಿಮೆಯಲ್ಲಿ ಮಾಲೀಕರ ನೇರ ಮೇಲ್ವಿಚಾರಣೆಯಲ್ಲಿ ಕೆಲಸ ಮಾಡುವುದು ಅಪೇಕ್ಷಣೀಯ. ಆದರೆ ಇವರಿಬ್ಬರ ಮಧ್ಯೆ ಯಾವುದೇ ಒಬ್ಬ ಮಧ್ಯವರ್ತಿ ಪ್ರವೇಶ ಮಾಡಿದರೂ ಕೂಡ ಅಲ್ಲಿ ಕಾರ್ಮಿಕರ ಶೋಷಣೆ ಆದೇ ಆಗುತ್ತದೆ. ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ಇದಿನಬ್ಬನವರೂ ಮತ್ತು ನಾನೂ ಕೂಡ ಒಂದು ಸಭೆಯಲ್ಲಿ ಪಂಗಳೂರಿನಲ್ಲಿ ಮಾತನಾಡುವಾಗ ನಾನು ಹೇಳಿದ್ದೇನೆ ಈ ಒಂದು ಅನಿಷ್ಟ ಪದ್ಧತಿಯನ್ನು ನಾವು ತೆಗೆದು ಹಾಕುತ್ತೇವೆ, ಈ ಮಾಲೀಕರು ಮತ್ತು ಕಾರ್ಮಿಕರ ಮಧ್ಯೆ ಯಾವುದೇ ಒಬ್ಬ ಮಧ್ಯವರ್ತಿಯೂ ಇರಕೂಡದು. ಅವರು ಇದ್ದರೆ ಅಲ್ಲಿ ಕಾರ್ಮಿಕರ ಶೋಷಣೆ ಆಗುತ್ತದೆಂದು ಹೇಳಿದ್ದೇನೆ. ಇದೂ ಅಲ್ಲದೆ ಈ ಮಧ್ಯವರ್ತಿಗಳಿಂದ ಕಾರ್ಮಿಕರ ಶೋಷಣೆಯಾಗುತ್ತಿದೆಯೆಂದು ಅನೇಕ ಕಾರ್ಮಿಕ ಸಂಘಗಳಿಂದ ನಮಗೆ ದೂರುಗಳು ಬಂದಿವೆಯೆಂದು ಹೇಳಿದ್ದೇನೆ. ಇದನ್ನು ಗಮನದಲ್ಲಿಟ್ಟುಕೊಂಡು ಇದೇ ತಿಂಗಳ ತಾರೀಖಿನಿಂದ ಇದನ್ನು ಮುಂದುವರಿಸಕೂಡದೆಂದು ಈ ಸಭೆಯಲ್ಲಿ ಅಬಾಲಿಷನ್ ಆಫ್ ಕಾಂಟ್ರ್ಯಾಕ್ಟ್ ಸಿಸ್ಟಂನ್ನು ಜಾರಿಗೆತರಲು ನಾವು ಯೋಜನೆ ಮಾಡುತ್ತಿದ್ದೇವೆ. ಈ ಮಧ್ಯವರ್ತಿಗಳು ಮಾಲೀಕರು ಮತ್ತು ಕಾರ್ಮಿಕರ ಮಧ್ಯೆ ಇರುತ್ತಾರೆ ಇದರಿಂದಾಗಿ ಕಾರ್ಮಿಕರಿಗೆ ಸವಲತ್ತು ಸಿಕ್ಕುತ್ತದೆಂದು ಮಾನ್ಯ ಸದಸ್ಯರಾದ ಇದಿನಬ್ಬನವರು ಹೇಳಿದ್ದಾರೆ. ಆದರೆ ಅವರಿಂದ ಈ ಕೆಲಸವನ್ನು ಮಾಡಿಸಿಕೊಳ್ಳುವುದು ಮಾಲೀಕರಿಗೆ ಬಿಟ್ಟಿರತಕ್ಕ ವಿಚಾರ. ಅದಕ್ಕೂ ನಮಗೂ ಸಂಬಂಧವಿಲ್ಲ. ಅವರನ್ನು ನೌಕರರನ್ನಾಗಿ ಪರಿಗಣಿಸಿದರೆ ಅದಕ್ಕೆ ನಮ್ಮ ಅಭ್ಯಂತರವಿಲ್ಲ. ಆದ್ದರಿಂದ ಈ ಪ್ರಶ್ನೆ ಇಲ್ಲಿ ಉದ್ಭವಿಸುವುದಿಲ್ಲ.

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಅಧ್ಯಕ್ಷರೆ...

ಅಧ್ಯಕ್ಷರು.—ತಾವು ಕುಳಿತುಕೊಳ್ಳಿ.

ಶ್ರೀ ಬಿ.ಎಂ. ಇದಿನಬ್ಬ.—ಈ ರೀತಿ ಮಾಡಿಬಿಟ್ಟರೆ ಬಡ ಮಹಿಳೆಯರು ಬೀದಿ ಬಿಕಾರಿಗಳಾಗು ತ್ತಾರೆ ಗುತ್ತಿಗೆದಾರರನ್ನು ಇಡುವುದಿದ್ದರೆ ಅದು ನಿವಂಗೆ ಬಿಟ್ಟ ವಿಚಾರ. ಬೀಡಿ ಎಲೆ, ಹೊಗೆಸೊಪ್ಪು ಸರಾಗವಾಗಿ ಮೊದಲಿನ ಹಾಗೆ ಸಿಗಂಪಂಥ ವ್ಯವಸ್ಥೆ ಮಾಡದೇ ಇದ್ದರೆ ಅವರು ಅಲ್ಲೊಲ್ಲೋಲಕಲ್ಲೊಲ್ಲೋಲ ವಾಗಿ ಕ್ರಾಂತಿಯಾದೀತು ಎಂದು ಹೇಳುತ್ತೇನೆ.

ಶ್ರೀ ಎಸ್. ಕೆ. ಕಾಂತ.—ಸನ್ಮಾನ್ಯ ಅಧ್ಯಕ್ಷರೆ, ಕಾರ್ಮಿಕರಿಂದ ಮತ್ತು ಕಾರ್ಮಿಕ ಸಂಘಗಳವ ರಿಂದ ಹೆಣ್ಣುಮಕ್ಕಳ ಮೇಲೆ ಅತ್ಯಾಚಾರ ಮತ್ತು ಶೋಷಣೆ ಆಗುತ್ತಿದೆ ಎಂಬ ದೂರುಗಳು ಬಂದಿವೆ. ಇಂಥ ಸಂದರ್ಭದಲ್ಲಿ ಬಹಳ ಪ್ರಗತಿಪರ ವಿಚಾರದವರಾದ ಇದಿನಬ್ಬನವರು ಕಾಂಟ್ರಾಕ್ಟರವರಿಗೆ ಏತಕ್ಕೆ ಸಪೋರ್ಟ್ ಮಾಡುತ್ತಾರೆ ಎಂಬುದು ಗೊತ್ತಾಗುತ್ತಿಲ್ಲ ಎರಡನೆಯದು ಮಾಲೀಕ ಬೀಡಿ ಕಟ್ಟಿಸ ಬೇಕಾದರೆ ತನ್ನ ವ್ಯವಸ್ಥೆಯನ್ನು ತಾನೇ ಮಾಡಿಕೊಳ್ಳಬೇಕೆ ತಾನೆ ನೌಕರರನ್ನು ಇಟ್ಟುಕೊಂಡು ಎಲೆಗಳನ್ನು ತಂಬಾಕನ್ನು ತರಿಸಿ ಬೀಡಿ ಸುತ್ತುವ ವ್ಯವಸ್ಥೆಯನ್ನು ಮಾಡಿಕೊಳ್ಳುತ್ತಾನೆ ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಶ್ರೀ ಬಿ.ಎಂ. ಇದಿನಬ್ಬ.—ನಾನು ಹೇಳುವುದು ಮೂಲಭೂತವಾದ ವಿಷಯ ಶ್ರೀ ಯು.ಭೂಪತಿ ಆರ್. ವೆಂಕಟರಾಮಯ್ಯ ಹಾಗೂ ಇದಿನಬ್ಬನವರು ಒಟ್ಟಿಗೆ ಮಾತನಾಡತೊಡಗಿದರು.

(ಗೊಂದಲ)

ಅಧ್ಯಕ್ಷರು.—ನಾನು ಅವಕಾಶ ಕೊಡುವುದಿಲ್ಲ.

ಶ್ರೀ ಬಿ.ಎಂ, ಇದಿನಬ್ಬ.—ಗುತ್ತಿಗೆದಾರರನ್ನು ಬಿಡಬೇಕು ಎಂದು ಹೇಳುವುದಿಲ್ಲ. ಬಡ ಮಹಿಳೆ ಯರಿಗೆ ಅನ್ಯಾಯವಾಗುತ್ತಿದೆ.

ಅಧ್ಯಕ್ಷರು.—ನಾನು ಮೂರು ಸಾರಿ ನಿಮಗೆ ಅವಕಾಶ ಕೊಟ್ಟಿದ್ದೇನೆ. ಈಗ ಮತ್ತೆ ಕೊಡುವು ದಕ್ಕಾಗುವುದಿಲ್ಲ.

ಶ್ರೀ ಬಿ.ಎಂ. ಇದಿನಬ್ಬ.—ಇದು ಬಡ ಕಾರ್ಮಿಕರ ವಿಚಾರ.

ಶ್ರೀ ಆರ್. ವೆಂಕಟರಾಮಯ್ಯ.—ಒಂದೇ ಒಂದು...

ಅಧ್ಯಕ್ಷರು.—ಆಗುವುದಿಲ್ಲ.

ಶ್ರೀ ಯು. ಭೂಪತಿ.—ಇದು ಒಂದೇ ಜಿಲ್ಲೆಗೆ ಸೀಮಿತವಾದ ಪ್ರಶ್ನೆ ಅಲ್ಲ.

ಅಧ್ಯಕ್ಷರು.—ಈಗ ಕೊಶ್ಚನ್ ಅವರ್ ಮುಗಿದಿದೆ. ನಿಮ್ಮ ಪ್ರಶ್ನೆಯೂ ಮುಂದೆ ಇದೆ. ಅದನ್ನು ಲ್ಯಾಪ್ಸ್ ಮಾಡಿದರೆ ಏನು ಮಾಡುತ್ತೀರಿ ? ನಾನು ರೂಲ್ಸ್ ಬಿಟ್ಟು ಹೋಗುವುದಿಲ್ಲ. ಮಾನ್ ರಾಮಯ್ಯನವರೇ ನಿಮ್ಮ ಪ್ರಶ್ನೆಗೆ ಟೈಂ ಬೇಕು ಎಂದು ಕೇಳಿದ್ದಾರೆ. ಈಗ ರಾಜೂಗೌಡರೇ, ತಾವು ಕೇಳಿ.

ಕೊಳ್ಳೇಗಾಲ ತಾಲ್ಲೂಕಿನ ಭೂರಹಿತರಿಗೆ ವಸತಿಯನ್ನು ಕಲ್ಪಿಸುವುದು

೧೩೮೮. ಶ್ರೀ ಜಿ. ರಾಜುಗೌಡ (ಹನಗಲ್ಲು).—ಮಾನ್ಯ ಕಂದಾಯ(ಪುನರ್ವಸತಿ) ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

೧) ಕೊಳ್ಳೇಗಾಲ ತಾಲ್ಲೂಕಿನಲ್ಲಿ ಭೂರಹಿತ ವಸತಿಯನ್ನು ಎಂದಿನಿಂದ ಪ್ರಾರಂಭ ಮಾಡಲಾಗಿದೆ,

೨) ಸರ್ಕಾರದಿಂದ ಈ ಯೋಜನೆಗೆ ಬಿಡುಗಡೆಯಾಗಿರುವ ಜಮೀನು ಒಟ್ಟು ವಿಸ್ತೀರ್ಣವೆಷ್ಟು ?

೩) ಎಷ್ಟು ಕುಟುಂಬಗಳಿಗೆ ಭೂಮಿಯನ್ನು ಹಂಚಿಸಲಾಗಿದೆ.

೪) ಈ ತಾಲ್ಲೂಕಿನಲ್ಲಿ ಪ್ರಾರಂಭದಿಂದಲೂ ಎಷ್ಟು ಜನ ಅನಧಿಕೃತವಾಗಿ ವ್ಯವಸಾಯ ಮಾಡಿ ಅಲ್ಲಿ ನೆಲಸಿರುತ್ತಾರೆ.

೫) ಈ ಕುಟುಂಬಗಳು ವಾಸಿಸುವ ಪ್ರದೇಶಗಳಲ್ಲಿ ಎಲ್ಲಾ ನಾಗರೀಕ ಸೌಲಭ್ಯಗಳು ಇವೆಯೇ ?